ಸಂಬಂಧಪಟ್ಟವರಂತೆಯೇ ಇರಲಿಲ್ಲ. ಸಿಕ್ಕ ಅಂಗಡಿಗಳಲ್ಲಿ, ಕಂಡಕಂಡವರಲ್ಲಿ ಸಾಲ ಮಾಡಿ ಮುಖ ಎತ್ತಿ ಓಡಾಡದಂತೆ ಮಾಡಿದ್ದರು. ಯಾರು ಯಾವ ಕ್ಷಣದಲ್ಲಿ ಸಾಲ ಹಿಂತಿರುಗಿಸಲು ದಬಾಯಿಸುತ್ತಾರೋ ಎಂಬ ದಿಗಿಲು ಲಕ್ಷ್ಮಿಗೆ ಸದಾ.

ಸಂಕೋಚ ಸ್ವಭಾವದ ಲಕ್ಷ್ಮಿ ಯಾರನ್ನೂ ಸಾಲಕ್ಕಾಗಲೀ, ಸಹಾಯಕ್ಕಾಗಲೀ ಯಾಚಿಸದ ಸ್ವಾಭಿಮಾನಿ. ಆಗಾಗ ಕಾಯಿಲೆ ಬೀಳುವ ಮಗಳು ಸೀತೆಯನ್ನು ತೋರಿಸಲು ಆಸ್ಪತ್ರೆ, ಎಮ್ಮೆಗಳ ಚಿಕಿತ್ಸೆಗೆ ಪಶು ಆಸ್ಪತ್ರೆ ಮತ್ತು ಬ್ಯಾಂಕ್ ಹೊರತುಪಡಿಸಿದರೆ ಲಕ್ಷ್ಮಿ ಎಲ್ಲೂ ಹೊರಗೆ ಹೋಗಲು ಇಷ್ಟಪಟ್ಟವಳಲ್ಲ. ಆದರೆ ಇಡೀ ಕುಟುಂಬವನ್ನು ಕ್ಷಣಾರ್ಧದಲ್ಲಿ ದುಃಖದಲ್ಲೂ, ಸಂಕಟದಲ್ಲೂ ದೂಡುತ್ತಿದ್ದರು ಮೇಷ್ಟ್ರು. ಲಕ್ಷ್ಮಿ ಈಗ ಹದಿನೈದು ವರ್ಷಗಳಿಂದಲೂ ನಾಳೆ ಏನೋ ನಾಡಿದ್ದು ಏನೋ ಎಂಬ ಆತಂಕದಲ್ಲಿ ಕಳೆದಿದ್ದಾಳೆ. ಪ್ರತಿ ದಿನ ಪ್ರತಿ ನಿಮಿಷವನ್ನು ಎಣಿಸೆಣಿಸಿ ಸೆಣಸಿದ್ದಾಳೆ. ಯಾವುದೇ ಕ್ಷಣದಲ್ಲಿ ಎಷ್ಟೂ ಖರ್ಚಿನ ಬಾಬ್ತು ಎದುರಾಗಬಹುದು. ಏನೂ ಖರ್ಚಿಲ್ಲವೆಂದು ಸಮಾಧಾನದ ನಿಟ್ಟುಸಿರು ಬಿಡುತ್ತಿರುವಾಗ ಸೀತೆಗೆ ದಮ್ಮೋ, ಭದ್ರಿಗೆ ಟೈಫಾಯಿಡೋ, ಗೀತಳಿಗೆ ಮಲೇರಿಯವೋ, ಜಯ್ಯಣ್ಣ ಮೇಷ್ಟ್ರಿಗೆ ಆಕ್ಸಿಡೆಂಟೋ ವಕ್ಕರಿಸಬಹುದು. ಅಲ್ಲದಿದ್ದರೆ ಹಿಂಡುವ ಎಮ್ಮೆಗೆ ಕೆಚ್ಚಲು ಬಾವೋ, ಗರ್ಭದ ಎಮ್ಮೆಗೆ ಗರ್ಭಪಾತವೋ ಕಾಣಿಸಿಕೊಳ್ಳಬಹುದು.

ಈಗೆರಡು ದಿನದ ಕೆಳಗೆ ಶಾಲೆಯಿಂದ ಹಿಂತಿರುಗುತ್ತಿದ್ದ ಭದ್ರಿಗೆ ನಾಯಿಯೊಂದು ಕಡಿದು ರಾದ್ಧಾಂತವಾಗಿತ್ತು. ಕೂಡಲೇ ಲಕ್ಷ್ಮಿ ಭದ್ರಿಯನ್ನು ಕರೆದುಕೊಂಡು ಆಸ್ಪತ್ರೆಗೆ ಹೋದರೆ ಅಲ್ಲಿ ಹುಚ್ಚು ನಾಯಿ ಕಡಿದರೆ ರೋಗಿಯ ಸಾವು ನಿಶ್ಚಿತವೆಂದೂ, ಅದಕ್ಕೆ ಸಂಬಂಧಪಟ್ಟ ಚಿಕಿತ್ಸೆ ನೀಡಿದರೆ ಬದುಕುವ ಅವಕಾಶವಿದೆಯೆಂದು ಡಾಕ್ಟರು ತಿಳಿಸಿದರಲ್ಲದೆ ಅದಕ್ಕೆ ಸಾವಿರಾರು ರೂಪಾಯಿ ಹೇಳಿದರು. ಈಗಿರುವ ಮೂರು ಮಕ್ಕಳ ಜೊತೆಗೆ ಸತ್ತು ಹೋದ ತನ್ನ ಇನ್ನಿಬ್ಬರು ಮಕ್ಕಳು ಲಕ್ಷ್ಮಿಗೆ ನೆನಪಾದರು. ಲಕ್ಷ್ಮಿ ತತ್ತರಿಸಿ ಹೋದಳು. ಅದು ಹುಚ್ಚು ನಾಯಿಯೋ ಅಲ್ಲವೋ ಎಂಬುದು ಸಹ ಗೊತ್ತಿರಲಿಲ್ಲ. 'ಇರುವ ಒಬ್ಬನೇ ಮಗನನ್ನು ಕಳೆದುಕೊಳ್ಳುತ್ತೀರಿ' ಎಂದು ಮತ್ತಷ್ಟು ದಿಗಿಲಿಕ್ಕಿಸಿದ ಡಾಕ್ಟ್ರು ತನ್ನ ಫೀಸನ್ನು ಡಬಲ್ ಮಾಡಿದ. ತೆಗೆದುಕೊಳ್ಳಬೇಕಾದ ಆರು ಇಂಜೆಕ್ಷನ್‌ಗಳ ದಿನಾಂಕ ಪಟ್ಟಿ ನೀಡಿ 'ಮುಂದಿನ ಸಲ ಬರುವಾಗ ದುಡ್ಡು ತರದೇ ಹೋದರೆ ಇಂಜೆಕ್ಷನ್ ಮಾಡುವುದಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದ. ಲಕ್ಷ್ಮಿಯ ತಲೆ ಸಂತೆಯಾಗಿತ್ತು. ತನ್ನ ಪ್ರೀತಿಯ ಮಗನನ್ನು ಸಾವು ಕಿತ್ತುಕೊಂಡು ಹೋಗಿ ಬಿಡುತ್ತದೆಯೋ ಎಂಬಂತೆ ಏಳು ವರ್ಷದ ಅವನನ್ನು ಹೂವಿನಂತೆ ಎತ್ತಿಕೊಂಡು ಮನೆ ಕಡೆ ನಡೆದಳು.

ಲಕ್ಷ್ಮಿಯ ಮಾತಿನಲ್ಲಿ ಅನಿಶ್ಚಿತತೆಯೂ, ದುರಂತದ ಛಾಯೆಯೂ ಮನೆ ಮಾಡಿದ್ದವು. ಲಕ್ಷ್ಮಿಯ ಧ್ವನಿಯು ಬರುಬರುತ್ತ ಕ್ಷೀಣಿಸಿ ದುರ್ಬಲವಾಗಿಯೂ, ಸುಸ್ತಾದಂತೆಯೂ ಕೇಳಿಸುತ್ತಿತ್ತು. ಚಿಕ್ಕವಳಿದ್ದಾಗ ಅದ್ಭುತ ಹಾಡುಗಾರ್ತಿ ಯಾಗಿದ್ದ ಲಕ್ಷ್ಮಿಯ ದನಿ ಈಗೀಗ ಒಡಕು ಒಡಕಾಗಿತ್ತು.

ದಿನವೂ ಮಲಗುವಾಗ ಲಕ್ಷ್ಮಿ ಒಂದೆರಡು ಸಾಲನ್ನು ಹಾಡದೆ ಭದ್ರಿ ಮತ್ತು ಸೀತ ಮಲಗುವುದಿಲ್ಲ. ಎಂಥ ದುಃಖದ ದಿನದಲ್ಲಿಯೂ ಅವಳು ಹಾಡಲೇಬೇಕು. ಅವಳ ಧ್ವನಿಯು ದುಃಖದ ಹಾಡುಗಳನ್ನು ಮಾತ್ರ ಹಾಡಬಲ್ಲಳೇನೋ ಎಂಬಂತಾಗಿತ್ತು. ಆ ಹಾಡು ಆ ಕತ್ತಲ ನೀರವ ರಾತ್ರಿಯಲ್ಲಿ ಎದೆಯೊಡೆಯುವಂತೆ ಕೇಳುತ್ತಿತ್ತು.

ಕಡಲಿನ ನೀರು ಸಿಹಿಯಿತ್ತು ಮೊದಲು
ಹೆಣ್ಣ ಕಣ್ಣೀರಿಂದ ಉಪ್ಪಾಯ್ತು ಕಡಲು
ಭೂಮ್ತಾಯಿ ಮೇಲೆ ಏಳೇಳು ಕಡಲು
ಹೆಣ್ಣ ಒಡಲುದ್ದಕ್ಕು ಕಡಲೋ ಕಡಲು.

ಅಪ್ಪ ಅಣ್ಣ ತಮ್ಮ ಗಂಡ
ಮಗನು ಮೊಮ್ಮಗನು ಮರಿ ಮಗನು ಗಿರಿಮಗನು
ಆಳಕ್ಕಾಳಕ್ಕಿಳಿದು
ಸವೆದೂ ಸವೆದು ಸವೆದಾದ ಕಡಲು

ಆಳಾಗಿ ಹೋಳಾಗಿ ತುತ್ತಾಗಿ
ಕಾಲಕಾಲಕ್ಕೆ ಹಾಸಿಗೆಗೆ ತೊತ್ತಾಗಿ
ಹಣ್ಣಾಗಿ ಸುಣ್ಣಾಗಿ ಬದುಕೇ ಹುಣ್ಣಾಗಿ
ನವೆದೂ ನವೆದು ನವೆದಾದ ಕಡಲು.

ಖಾಲಿಯಾಗಲು ಜೋಡಿಕಣ್ಣ ಕಾಲುವೆ
ಬರಬಹುದೇನೊ ಮೊದಲು ಕಾಲನ ಸಾವೆ
ತೇಲಿಹುದು ಗಂಡಿನ ಮೋಜಿನ ನಾವೆ.

ಇಷ್ಟು ಹಾಡುವಲ್ಲಿ ಲಕ್ಷ್ಮಿಯ ದನಿ ತೊಯ್ದು ಹೋಗಿರುತ್ತದೆ. ದೊಡ್ಡ ಮಗಳು ಗೀತಳ ದಿಂಬೆಲ್ಲ ಒದ್ದೆಯಾಗಿರುತ್ತದೆ. ಸೀತ ಎಂಬ ಆರು ಕ್ಲಾಸಿನ ಕೂಸು ಬಿಕ್ಕಿಬಿಕ್ಕಿ ಅಳುತ್ತಿರುತ್ತದೆ. ಈ ಹಾಡಿನರ್ಥವನ್ನು ತನಗೆ ತಿಳಿದಂತೆ ಅರ್ಥ ಮಾಡಿಕೊಂಡಿರುವ ಎರಡನೇ ಕ್ಲಾಸಿನ ಭದ್ರಿ ಕಣ್ಣೊರೆಸಿಕೊಳ್ಳುತ್ತ ಅಮ್ಮನ ಕಿವಿಯಲ್ಲಿ ಹೇಳುತ್ತಾನೆ. 'ಅಮ್ಮ ಇದನ್ನು ಸುಳ್ಳು ಮಾಡುತ್ತೇನೆ. ಇದನ್ನು ಸುಳ್ಳು ಮಾಡುತ್ತೇನೆ. ಈ ಹಾಡು ಸಾಕಿನ್ನು. ನೀನು ಬೇರೆ ಹಾಡುವಂತೆ ಮಾಡುತ್ತೇನೆ. ಖುಷಿಯ ಹಾಡು'. ಭದ್ರಿ ಬಿಕ್ಕುತ್ತಿರುವುದರಿಂದ, ಭಾವಾವೇಶಕ್ಕೊಳಗಾಗಿರುವುದರಿಂದ ತನ್ನ ದನಿಯನ್ನು ತಹಬಂದಿಗೆ ತಂದುಕೊಳ್ಳಲಾರದೇ ಹೋದ. ಅವನು ಅಂದದ್ದು ಆ ಕತ್ತಲ ನೀರವ ರಾತ್ರಿಯಲ್ಲಿ ಉದ್ಘೋಷದಂತೆ ಕೇಳುತ್ತದೆ.

ಲಕ್ಷ್ಮಿಗೆ ಮುಂದಕ್ಕೆ ಯಾವ ಹಾಡನ್ನೂ ಹಾಡಲಾಗುವುದಿಲ್ಲ. ಮಕ್ಕಳೂ ಒತ್ತಾಯಿಸುವುದಿಲ್ಲ. ಅವರೂ ಕೇಳಲಾಗದೆ ಸೋತು ಹೋಗಿರುತ್ತಾರೆ. ನಾಲ್ಕು ದುಃಖತಪ್ತ ಜೀವಗಳು ಹಾಗೆಯೇ ನಿಧಾನಕ್ಕೆ ನಿದ್ದೆಗೆ ಜಾರುತ್ತಾರೆ. ಆದರೆ ಒಬ್ಬೊಬ್ಬರಿಗೆ ಒಂದೊಂದು ಕನಸಿನ ದಾಳಿ. ತಂದೆ ಹೊಡೆದಂತಾಯಿತು ಎಂದು ಚಿಟ್ಟನೆ ಚೀರಿ ಎದ್ದು ಕೂರುತ್ತಾನೆ ಭದ್ರಿ. ಝುಳ ಝುಳ ಬೆವರಿ ಎದ್ದು ಕೂರುತ್ತಾಳೆ ಸೀತ. ಲಕ್ಷ್ಮಿ ಇಬ್ಬರನ್ನೂ ಬಾಚಿ ತಬ್ಬಿ ಸಂತೈಸುತ್ತಾಳೆ. ಅಬ್ಬ ! ಅಮ್ಮನೆಂದರೆ ಎಷ್ಟು ಭದ್ರತೆ, ಎಂಥ ಸುರಕ್ಷೆ, ಅಖಂಡ ಪ್ರೀತಿ! ಒಳಗೊಳಗೇ ಕೊರಗುವ ಗೀತಳಿಗೆ ಮಕ್ಕಳನ್ನು ಹೇಗೆ ಸಂತೈಸಬೇಕೆಂದು ಈಗಾಗಲೇ ಗೊತ್ತಾಗಿದೆ. ಸೀತೆ ಭದ್ರಿಯರು ಗೀತಾಳಲ್ಲಿ ತಾಯಿಯನ್ನು ಈಗಾಗಲೇ ಕಾಣುತ್ತಿದ್ದಾರೆ.


ಜಯ್ಯಣ್ಣ ಮೇಷ್ಟ್ರ ಶಾಲೆಯ ಉಪಾಧ್ಯಾಯರು ಮತ್ತು ಮುಖ್ಯೋಪಾಧ್ಯಾಯರು ಲಕ್ಷ್ಮಿಗೆ ಪರಿಚಿತರೇ ಆಗಿದ್ದರು. ಆಗಾಗ್ಗೆ ಶಾಲೆಗೆ ತಪ್ಪಿಸಿಕೊಳ್ಳುತ್ತಿದ್ದ ಜಯಣ್ಣ ಮೇಷ್ಟ್ರ ಬಳಿ ತಿಂಗಳ ಮಾಮೂಲು ನಿಗದಿ ಮಾಡಿಕೊಂಡಿದ್ದ ಹೆಡ್ ಮಾಸ್ಟ್ರು ಜಯಣ್ಣನ ಮೇಲೆ ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿರಲಿಲ್ಲ. ಗ್ರಾಮಸ್ಥರಿಂದ ಬಂದ ದೂರಿನ ಪತ್ರಗಳನ್ನು ಮೇಲಧಿಕಾರಿಗಳಿಗೆ ಸಲ್ಲಿಸದೆ ವಿಚಾರಣೆಯ ನಾಟಕವಾಡಿ ಜಯ್ಯಣ್ಣನನ್ನು 'ಬಚಾವು' ಮಾಡಿದ್ದರು.

ಹೋಬಳಿ ಕೇಂದ್ರವಾದ ಆ ಊರಿನ ಎಲ್ಲರು ಪರಿಚಿತರಾಗಿದ್ದರೂ ಲಕ್ಷ್ಮಿ ತಾನಾಯಿತು ಮತ್ತು ತನ್ನ ಮನೆವಾಳ್ತನವಾಯಿತು ಎಂಬಂತಿದ್ದಳು. ಅನಿವಾರ್ಯ ಇದ್ದಾಗ ಮಾತ್ರ ಪರರ ಸಂಪರ್ಕಕ್ಕೆ ಬಂದವಳು. ಇಂದು ಭದ್ರಿಗೆ ನಾಯಿ ಕಡಿದು ಮೂರನೇ ದಿನವಾಗಿದ್ದು, ಎರಡನೇ ಇಂಜೆಕ್ಷನ್ ಮಾಡಿಸಿಕೊಂಡು ಬರುವುದಿತ್ತು. ಕೈಯಲ್ಲಿ ಒಂದು ಪೈಸೆಯೂ ಇರದ ಲಕ್ಷ್ಮಿ

## ಮರ ಕತ್ತರಿಸುವ ಜನ

ಮರ
ಕತ್ತರಿಸಲು
ಬಂದ
ಜನ
ಬಿಸಿಲು ಹೆಚ್ಚೆಂದು
ಮರದ
ನೆರಳಲ್ಲೇ
ನಿಂತರು.!

★ ತೈರೊಳ್ಳಿ ಮಂಜುನಾಥ ಉಡುಪ


ಈಶ್ವರ